ಪಿ.ಡಬ್ಲ್ಯು-01

**ಸಾಕ್ಷಿಯನ್ನು ದಿನಾಂಕಃ 18.10.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಎದುರುದಾರರ ಪರ ಶ್ರೀ ಕೆ.ಟಿ.ಆರ್, ವಕೀಲರಿಂದಃ**

1 ನೇ ಎದುರುದಾರರನ್ನು ಮದುವೆಯಾಗಿ ಸುಮಾರು 17 ವರ್ಷಗಳಾಗಿರುತ್ತವೆ ಎಂದರೆ ಸರಿ. ಈ ಅರ್ಜಿ ಸಲ್ಲಿಸುವ 6 ತಿಂಗಳ ಹಿಂದೆ 1 ನೇ ಎದುರುದಾರರನ್ನು ಬಿಟ್ಟುನಮ್ಮ ತವರು ಮನೆಗೆ ಹೋಗಿದ್ದೆ ಎಂದರೆ 20 ದಿವಸ ನನ್ನನ್ನು ಬಾಡಿಗೆ ಮನೆಯಲ್ಲಿ ಬಿಟ್ಟು ಹೋಗಿದ್ದರಿಂದ ನಾನು ಮಹಿಳಾ ಪೊಲೀಸ್ ಠಾಣೆಗೆ ದೂರು ನೀಡಿರುತ್ತೇನೆ. 3 ವರ್ಷಗಳ ಕಾಲ ನಾನು ಮತ್ತು 1 ನೇ ಎದುರುದಾರರು ಬಾಡಿಗೆ ಮನೆಯಲ್ಲಿ ವಾಸವಿದ್ದೆವು, ನಮ್ಮ ಜೊತೆ ಬೇರೆ ಯಾರು ಇರಲಿಲ್ಲ. ನಮಗೆ ಮಕ್ಕಳಿರುವುದಿಲ್ಲ. ಎಷ್ಟು ಬಾಡಿಗೆ ಕೊಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ನಾವು ಬಾಡಿಗೆಗೆ ವಾಸವಿದ್ದ ಬೀದಿಯಲ್ಲಿ ಬೇರೆ ಮನೆಗಳಿಗೆ ಎಷ್ಟು ಬಾಡಿಗೆ ಕೊಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಒಂದು ಮನೆಯಲ್ಲಿ 10 ಜನರು ಇದ್ದರೆ ತಿಂಗಳಿಗೆ ರೂ.5,000 ರಿಂದ 10,000/- ಖರ್ಚು ಇರುತ್ತದೆ. ನಾನು ಮಹಿಳಾ ಪೊಲೀಸ್ ಠಾಣೆಗೆ ದೂರು ಕೊಟ್ಟಿರುತ್ತೇನೆ ಎಂದು ತೋರಿಸಲು ನನ್ನ ಬಳಿ ದೂರಿನ ಪ್ರತಿ ಇರುವುದಿಲ್ಲ. ನಾನು ದೂರು ಕೊಟ್ಟ ಬಗ್ಗೆ ಠಾಣೆಯವರು ಸ್ವೀಕೃತಿ ಅಥವಾ ಹಿಂಬರಹ ನೀಡಿರುವುದಿಲ್ಲ. ನಾನು ದೂರು ಕೊಟ್ಟಾಗ ಅದರಲ್ಲಿ ಏನೆಲ್ಲಾ ಬರೆದಿತ್ತು ಎಂದು ನಾನು ತಿಳಿದುಕೊಂಡಿರುವುದಿಲ್ಲ, ಆದರೆ ದೂರನ್ನು ನಮ್ಮ ವಕೀಲರೇ ಬರೆದಿರುತ್ತಾರೆ. ನಾನು ಸಲ್ಲಿಸಿರುವ ಅರ್ಜಿಯನ್ನು ಓದಿಸಿ ತಿಳಿದುಕೊಂಡಿರುತ್ತೇನೆ, ಆದರೆ ಅರ್ಜಿಯಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿರುವುದಿಲ್ಲ. ಆಹಾರ ಮತ್ತು ಬಟ್ಟೆಗಾಗಿ ಜೀವನಾಂಶ ಕೋರಿ ಅರ್ಜಿ ಸಲ್ಲಿಸಿರುತ್ತೇನೆ. ಇದನ್ನು ಹೊರತುಪಡಿಸಿ ಬೇರೆ ಏನು ಹೇಳಿರುವುದಿಲ್ಲ. ನನ್ನ ಗಂಡನ ತಂದೆ ಕಾಳಯ್ಯ ಅಂದರೆ 2 ನೇ ಎದುರುದಾರರು ಮೃತಪಟ್ಟಿರುತ್ತಾರೆ ಎಂದರೆ ಸರಿ. ಎದುರುದಾರರು ತನ್ನ ತಾಯಿ, ತಂಗಿ ಮತ್ತು ತಮ್ಮನನ್ನು ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿ. 1 ನೇ ಎದುರುದಾರರು ಕಾವಲುಗಾರರಾಗಿ ಕೆಲಸ ಮಾಡುತ್ತಿದ್ದಾರೆ ಎಂದರೆ ಸರಿ.

**ಪಿ.ಡಬ್ಲ್ಯು–01**

1 ನೇ ಎದುರುದಾರರಿಗೆ ರೂ.9000/- ಕೊಡತ್ತಾರೆ ಎಂದರೆ ನಮ್ಮಂತವರಿಗೆ ರೂ.10 ರಿಂದ 12,000/- ಕೊಡುತ್ತಾರೆ, ಅವರಿಗೆ ಇನ್ನೂ ಹೆಚ್ಚು ಸಂಬಳ ಕೊಡುತ್ತಾರೆ. ನನಗೆ ಕೆಲಸ ಕೊಡುತ್ತಾರೆ, ನಾನು ಹೋಗುತ್ತಿಲ್ಲ ಎಂದರೆ ನನಗೆ ಕೆಲಸ ಮಾಡಲು ಆಗುವುದಿಲ್ಲ. ನನಗೆ 39 ವರ್ಷ ಪ್ರಾಯವಾಗಿರುತ್ತದೆ. 1 ನೇ ಎದುರುದಾರರಿಗೆ ಸುಮಾರು 53 ವರ್ಷ ಪ್ರಾಯವಾಗಿರುತ್ತದೆ ಎಂದರೆ ಸರಿ. 1 ನೇ ಎದುರುದಾರರಿಗೆ ನನಗಿಂತ ಹೆಚ್ಚು ವಯಸ್ಸಾಗಿರುವುದರಿಂದ ಅವರಿಗೆ ದುಡಿಯಲು ಸಾಮರ್ಥ್ಯ ಕಡಿಮೆ ಇರುತ್ತದೆ ಎಂದರೆ ಸರಿ. ಸಾಕ್ಷಿಯು ಸ್ವತಃ ಮುಂದುವರಿದು ಅವರು ಏಕೆ ಮದುವೆ ಮಾಡಿಕೊಳ್ಳಬೇಕಾಗಿತ್ತು ಎಂದು ನುಡಿಯುತ್ತಾರೆ. ನನ್ನ ಮತ್ತು 1 ನೇ ಎದುರುದಾರರ ಮದುವೆಯನ್ನು ಎರಡೂ ಕುಟುಂಬದ ಹಿರಿಯರು ನಿಂತು ಮಾಡಿರುತ್ತಾರೆ ಎಂದರೆ ಸರಿ. ಎದುರುದಾರರ ಮನೆ ಚಿಕ್ಕಮನೆಯಾಗಿರುತ್ತದೆ ಎಂದರೆ ಸರಿಯಲ್ಲ. ಈ ರೀತಿ ಚಿಕ್ಕದಾಗಿದ್ದರಿಂದ ಬಾಡಿಗೆ ಮನೆ ಮಾಡುವಂತೆ ನಾನೇ 1 ನೇ ಎದುರುದಾರರಿಗೆ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಬಾಡಿಗೆ ಮನೆಯಲ್ಲಿದ್ದಾಗ ಬಾಡಿಗೆ ಪಾವತಿಸಿಕೊಂಡು ಸಂಸಾರ ನಡೆಸುವುದು ಕಷ್ಟವಾಗುತ್ತಿತ್ತು ಎಂದರೆ ಸರಿಯಲ್ಲ. ಬಾಡಿಗೆ ಮನೆಯಲ್ಲಿರುವಾಗ ವಾಷಿಂಗ್ ಮೆಷಿನ್ ಮತ್ತು ಮಿಕ್ಸಿ ತರುವಂತೆ 1 ನೇ ಎದುರುದಾರರನ್ನು ಒತ್ತಾಯಿಸುತ್ತಿದ್ದೆ ಎಂದರೆ ಸರಿಯಲ್ಲ. ನಾನು 1 ನೇ ಎದುರುದಾರರಿಗೆ ಚಲನಚಿತ್ರ ತೋರಿಸುವಂತೆ ಹಾಗೂ ಹೊಟೇಲ್ ಗೆ ಕರೆದುಕೊಂಡು ಹೋಗುವಂತೆ ಬಲವಂತ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಬಾಡಿಗೆ ಮನೆಯಲ್ಲಿರುವಾಗ 1 ನೇ ಎದುರುದಾರರು ಕಾವಲುಗಾರಿಕೆ ಕೆಲಸಕ್ಕೆ ಹೋದಾಗ ನಾನು ಬೀಗ ಹಾಕಿಕೊಂಡು ನನ್ನ ತವರು ಮನೆಗೆ ಹೋಗುತ್ತಿದ್ದೆ ಎಂದರೆ ಸರಿಯಲ್ಲ. 1 ನೇ ಎದುರುದಾರರು ಕೆಲಸ ಮುಗಿಸಿಕೊಂಡು ಬಂದ ಸಂದರ್ಭದಲ್ಲಿ ಮನೆಗೆ ಬೀಗ ಹಾಕಿರುವುದನ್ನು ನೋಡಿ ನನಗೆ ಫೋನ್ ಮಾಡಿ ಕರೆದಾಗ ನಾನು ಮನಗೆ ಬರುವುದಿಲ್ಲವೆಂದು 1 ನೇ ಎದುರುದಾರರನ್ನು ಬೈಯ್ಯುತ್ತಿದೆ ಎಂದರೆ ಸರಿಯಲ್ಲ. ನಾನು ತವರು ಮನೆಗೆ ಹೋದಾಗ 1 ನೇ

ಎದುರುದಾರರು ನನ್ನ ತವರು ಮನೆಗೆ ಬಂದು ಒಟ್ಟಿಗೆ ಸಂಸಾರ ಮಾಡಲು ಕರೆದಿರುತ್ತಾರೆ ಎಂದರೆ ಅವರು ಬಂದಿರುವುದಿಲ್ಲ, ಆದರೆ ಈಗಲೂ ಕೂಡ ಇಬ್ಬರು ಕೆಲಸ ಮಾಡಿಕೊಂಡು ಸಂಸಾರ ಮಾಡೋಣವೆಂದು ಹೇಳಿದರೆ ಅವರು ಬರುತ್ತಿಲ್ಲ. ಗ್ರಾಮದ ಹಿರಿಯರು ನನಗೆ ಬುದ್ದಿವಾದ ಹೇಳಿ ಗಂಡನ ಜೊತೆ ಹೋಗುವಂತೆ ಹೇಳಿದ್ದರೂ ಕೂಡ ನಾನು ತಿರಸ್ಕಾರ ಮಾಡಿರುತ್ತೇನೆ ಎಂದರೆ ಸರಿಯಲ್ಲ. 2 ರಿಂದ 4 ನೇ ಎದುರುದಾರರಿಗೆ ಕಿರುಕುಳ ಕೊಡುವ ಉದ್ದೇಶದಿಂದ ಅವರನ್ನು ಪಕ್ಷಗಾರರನ್ನಾಗಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. 1 ನೇ ಎದುರುದಾರರು 2022 ರಲ್ಲಿ ಬಾಡಿಗೆ ಮನೆ ಮಾಡಿ ನನ್ನನ್ನು ಕರೆದರೂ ಕೂಡ ನಾನು ಹೋಗಿರುವುದಿಲ್ಲ ಎಂದರೆ ಬಾಡಿಗೆ ಮನೆಯಲ್ಲಿ ಇರಲು ನನಗೆ ಇಷ್ಟವಿರುವುದಿಲ್ಲ, ಸ್ವಂತ ಮನೆಗೆ ಕರೆದುಕೊಂಡು ಹೋದರೆ ಹೋಗುತ್ತೇನೆ. 1 ನೇ ಎದುರುದಾರರು ನನಗೆ ಯಾವುದೇ ಕಿರುಕುಳ ಕೊಡುವುದಾಗಲಿ ಅಥವಾ ನನ್ನನ್ನು ಹಿಯಾಳಿಸುವುದಾಗಲಿ ಮಾಡಿಲ್ಲ ಎಂದರೆ ಸರಿಯಲ್ಲ. 1 ನೇ ಎದುರುದಾರರು ನನ್ನನ್ನು ಪ್ರೀತಿ ವಾತ್ಸಲ್ಯದಿಂದ ನೋಡಿಕೊಂಡಿದ್ದರೂ ಕೂಡ ನಾನೇ ಅವರನ್ನು ನಿರ್ಲಕ್ಷ್ಯ ಮಾಡಿ ನನ್ನ ತವರುಮನೆಗೆ ಹೋಗಿರುತ್ತೇನೆ ಎಂದರೆ ಸರಿಯಲ್ಲ.

ಈ ಹಿಂದೆ ನಾನು ಕಾರ್ಖಾನೆಗೆ ಕೆಲಸಕ್ಕೆ ಹೋಗುತ್ತಿದ್ದೆ ಎಂದರೆ ಸರಿ. ನಾನು ಕಳೆದ 4 ವರ್ಷಗಳಿಂದ ಕೆಲಸಕ್ಕೆ ಹೋಗುತ್ತಿಲ್ಲ. ನಾನು ಕಾರ್ಖಾನೆಗೆ ಕೆಲಸಕ್ಕೆ ಹೋಗುತ್ತಿದ್ದಾಗ ತಿಂಗಳಿಗೆ ರೂ.7000/- ಕೊಡುತ್ತಿದ್ದರು. ಎದುರುದಾರರು ಈಗಲೂ ಕೂಡ ನನ್ನ ಜೊತೆ ಸಂಸಾರ ನಡೆಸಲು ಸಿದ್ದರಿದ್ದರೂ ಕೂಡ ನಾನೇ ಅವರನ್ನು ತಿರಸ್ಕಾರ ಮಾಡಿ ನನ್ನ ತವರು ಮನೆಗೆ ಹೋಗಿರುತ್ತೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಕಾರಣವಿಲ್ಲದೆ 1 ನೇ ಎದುರುದಾರರನ್ನು ಬಿಟ್ಟು ನನ್ನ ತವರು ಮನೆಗೆ ಹೋಗಿರುವುದರಿಂದ 1 ನೇ ಎದುರುದಾರರು ನನಗೆ ಯಾವುದೇ ಜೀವನಾಂಶ ಕೊಡಲು ಭಾಧ್ಯರಲ್ಲ ಎಂದರೆ ಸರಿಯಲ್ಲ. ನಾನು ಮಹಿಳಾ ಪೊಲೀಸ್ ಠಾಣೆಗೆ ಯಾವುದೇ ದೂರು ನೀಡದಿದ್ದರೂ ಈ

ಹಿಂದೆ ಪ್ರಕರಣಕ್ಕೋಸ್ಕರ ಮಹಿಳಾ ಪೊಲೀಸ್ ಠಾಣೆಗೆ ದೂರು ನೀಡಿದ್ದೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇರುವುದಿಲ್ಲ.

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

ಸಹಿ/-

**ಪ್ರಧಾನ ದಿವಾನಿ ನಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.,**

**ನಂಜನಗೂಡು.**